ಭೋಜನದ ವ್ಯವಸ್ಥೆ ಮಾಡುವುದು, ಆಮೇಲೆ ಬೀಗರ ಊಟದ ಔತಣ ಏರ್ಪಡಿಸುವುದು ಪ್ರತಿಷ್ಠೆಯ ಪ್ರಶ್ನೆಯಾಗಿ ಕಾಡತೊಡಗಿತು. ಹೀಗಾಗಿ ಎಲ್ಲ ಮದುವೆಗಳು ಛತ್ರಕ್ಕೆ ಸ್ಥಳಾಂತರಗೊಂಡವು. ಹಳ್ಳಿಗಳಲ್ಲಿ ಮದುವೆ ಚಪ್ಪರಗಳನ್ನು ನೋಡಿ ಎಷ್ಟೋ ವರ್ಷಗಳಾದವು' ಎಂದು ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ನಂಜುಂಡೇಗೌಡ, ಹಿಂದೊಮ್ಮೆ ಹೇಳಿದ್ದರು.

'ಮದುವೆ ಮಾಡುವಲ್ಲಿ ಪ್ರತಿಷ್ಠೆಯ ಪ್ರಶ್ನೆಗೆ ಉತ್ತರಗಳನ್ನು ಹುಡುಕುತ್ತಾ ಹೋದಾಗ, ಖರ್ಚು ಹೆಚ್ಚಿಸುತ್ತಾ ಹೋದಾಗ, ಸಿಕ್ಕಾಪಟ್ಟೆ ಸಾಲವಾಗುವುದು ಸಾಮಾನ್ಯವಾಯಿತು. 'ಮಂಡಿಗಂಟ ಕಬ್ಬು, ಎದೆಗಂಟ ಸಾಲ'ದ ಕಥೆಗಳು ಮನೆ–ಮನೆಯಲ್ಲಿ ಕೇಳಿಬಂದವು. ಗದ್ದೆ ಮಾರುವುದನ್ನು ಬಿಟ್ಟು ಬೇರೆ ಆಯ್ಕೆಗಳೇ ಅವರಿಗೆ ಉಳಿಯದಾದವು' ಎಂದು ವೈಭವದ ಮದುವೆಗಳ ಹಿಂದಿನ ಸಾಮಾಜಿಕ ಸಮಸ್ಯೆಯ ಮೇಲೆ ಅವರು ಬೆಳಕು ಚೆಲ್ಲಿದ್ದರು. ಛತ್ರಕ್ಕೆ ಸ್ಥಳಾಂತರವಾಗಬೇಕಿದ್ದ ಎಷ್ಟೋ ಮದುವೆಗಳು ಈ ವರ್ಷ ಹಳ್ಳಿಗಳಲ್ಲಿಯೇ, ಅದೂ ಅವರವರ ಮನೆಗಳ ಮುಂದೆ, ತುಂಬಾ ಸರಳವಾಗಿ ನಡೆದು, ಸಾವಿರಾರು ರೈತರು ಹೊಲ ಕಳೆದುಕೊಳ್ಳುವ ಪ್ರವೃತ್ತಿಗೆ ತಡೆಬಿದ್ದಿದೆ. ಕೊರೊನಾ ಆ ನಿಟ್ಟಿನಲ್ಲಿ ಸದ್ದಿಲ್ಲದ ಕ್ರಾಂತಿಯನ್ನೇ ಮಾಡಿದೆ. ಹೊಲ ಮಾರಾಟವಾಗದೆ, ಸಾಲವಾಗದೆ ಮದುವೆಯಾಗಿದ್ದರೂ ಕೆಲವರಿಗೆ ಸಮಾಧಾನವಿಲ್ಲ. ಪ್ರತಿಷ್ಠೆಗೆ ತಕ್ಕಂತೆ ಮದುವೆ ಮಾಡಲಾಗಲಿಲ್ಲ ಎನ್ನುವ ಕೊರಗು ಅವರಿಗೆ. ಆದರೆ, ಬಹುತೇಕರಿಗೆ ಸರಳ ಮದುವೆಯ ಹೊಸ ಸಂಪ್ರದಾಯ ಬಲು ಖುಷಿ ತಂದಿದೆ.

## ಸರಳತೆ... ನ್ಯೂ ನಾರ್ಮಲ್

ಸರಳ ಮದುವೆಗಳ ಹಿಂದಿನ ನಿರಾಳಭಾವದ ಅನುಭವ ಅವರಿಗೆ ಆಗುತ್ತಿದ್ದು, ಕೊರೊನಾದ ಅಬ್ಬರ ಸಂಪೂರ್ಣವಾಗಿ ತಗ್ಗಿದ ಬಳಿಕವೂ ಆ ಸರಳತೆಯು 'ನ್ಯೂ ನಾರ್ಮಲ್' ಆಗುವ ಲಕ್ಷಣ ಕೂಡ ಗೋಚರಿಸತೊಡಗಿದೆ. ಕೊಪ್ಪಳದ ಹೇಮರೆಡ್ಡಿ ತವದಿ ಅವರ ಮಾತಿನಲ್ಲಿ ಈ ಆಶಯ ತುಂಬಾ ಸ್ಪಷ್ಟವಾಗಿ ಎದ್ದು ಕಾಣುತ್ತದೆ. 'ಎರಡು ವರ್ಷಗಳ ಹಿಂದೆ ನನ್ನ ಮೊದಲ ಮಗಳ ಮದುವೆಗೆ ನಾಲ್ಕು ಲಕ್ಷ ರೂಪಾಯಿ ವ್ಯಯಿಸಿದ್ದೆ. ಈ ವರ್ಷ ಏಪ್ರಿಲ್‌ನಲ್ಲಿ ನನ್ನ ಎರಡನೇ ಮಗಳ ಮದುವೆಯನ್ನು ಮಾಡಬೇಕಿತ್ತು. ಛತ್ರವನ್ನೂ ಬುಕ್ ಮಾಡಿದ್ದೆ. ಲಾಕ್‌ಡೌನ್ ಕಾರಣದಿಂದ ಮದುವೆ ನಡೆಸುವುದು ಸಾಧ್ಯವಾಗಿರಲಿಲ್ಲ. ಆಮೇಲೆ ಮದುವೆಗೆ 50 ಜನ ಮಾತ್ರ ಸೇರಬಹುದು ಎಂದು ಸರ್ಕಾರ ಆದೇಶ ಹೊರಡಿಸಿತು. ಅಷ್ಟು ಕಡಿಮೆ ಜನರಾದರೆ ಛತ್ರ ಏಕೆ ಬೇಕು ಎಂದು ಮನೆಯ ಮುಂದೆಯೇ ಮದುವೆಯನ್ನು ಮಾಡಿದೆವು. 40 ಸಾವಿರ ರೂಪಾಯಿಯಲ್ಲಿ ಎಲ್ಲವೂ ಮುಗಿದುಹೋಯಿತು' ಎಂದು ಅವರು ಹೇಳುತ್ತಾರೆ.

'ಎರಡನೇ ಮಗಳಿಗೂ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ ಎಂದು ಲೆಕ್ಕಹಾಕಿ, ಅಷ್ಟು ಹಣವನ್ನು ಎತ್ತಿಟ್ಟಿದ್ದೆ. ಉಳಿದ ಹಣವನ್ನು ಅವಳ



